## Restoration of Chikkahole Dam

158 SRI M. C. BASAPPA (Chamarajanagara.)—Will the Chief Minister be pleased to state.—

(*a*) the year in which Chikkahole Dam in Chamarajanagar Taluk breached:

(*b*) the Estimated cost for restoration;

(*c*) whether the Design of the Dam is changed:

(*d*) if so, details of the changes made;

(*e*) whether there is any delay in the time scheduled for restoration;

(*f*) when it is likely to be completed and water let-out for irrigation?

SRI S. BANGARAPPA (Minister for Public Works) [On behalf of SRI D. DEVARAJ URS (Chief Minister)].—

(*a*) December 1972.

(*b*) Rs. 250-00 lakhs.

(*c*) Yes.

(*d*) (a) The spillway capacity has been increased to 45,000 cusecs from 15,000 cusecs.

(b) Instead of a central spillway, spillway on the right flank is proposed.

(c) Existing masonry dam has been encased with earthen embankment both on upstream and downstream sides.

(*e*) No.

(*f*) It is likely to be completed by October 1978 and water will be let-out immediately thereafter.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಈ ಕೆರೆಯ ಒರಿಜಿನಲ್ ಅಂದಾಜು ಎಷ್ಟಕ್ಕೆ ಮಾಡಿಸಲಾಗಿತ್ತು ಎಂಬುದನ್ನು ಹೇಳುವುದಕ್ಕೆ ಆಗುತ್ತದೆಯೇ?

† ಶ್ರೀ ಎಸ್. ಬಂಗಾರಪ್ಪ.—೭೨ ಲಕ್ಷ ರೂಪಾಯಿಗಳು.

ಶ್ರೀ ಎಂ. ಸಿ. ಬಸಪ್ಪ.—೭೨ ಲಕ್ಷ ರೂಪಾಯಿಗಳ ಏರ್ಪಾಡು ಆಗಬಹುದೆಂದು ಅಂದಾಜು ಮಾಡಿದ ಕಾಲಕ್ಕೆ ೨೫೦ ಲಕ್ಷ ರೂಪಾಯಿಗಳು ಬರೀ ರೆಸ್ಟೋರೇಷನ್‌ಗೆ ಬೇಕು ಅಂತ ಹೇಳುತ್ತಿದ್ದೀರಿ ಇದು ಬಹಳ ದುಬಾರಿ ಆಯಿತು, ಅದಕ್ಕೆ ಕಾರಣವೇನು ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಈ ಚಿಕ್ಕ ಹೊಳೆ ಡ್ಯಾಂ ಕಟ್ಟಿದಾದ ಮೇಲೆ ಹಿಂದೆ ಇದ್ದ ರೀತಿಯಲ್ಲಿಯೇ ಆ ಡ್ಯಾಂ ಇದ್ದರೆ ಉಳಿಯುವುದಿಲ್ಲವೆಂದು ಎಕ್ಸ್‌ಪರ್ಟ್ ಕಮಿಟಿಯವರು ತೀರ್ಮಾನ ಕೊಟ್ಟಿದ್ದರಿಂದ, ಅದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಅಲ್ಲಿಗೆ ಮಾಡಲೇ ಬೇಕಾದ ಕಾರ್ಯವನ್ನು ಮಾಡಿಸಿದ್ದರಿಂದ ೨೫೦ ಲಕ್ಷ ರೂಪಾಯಿಗಳ ಯೋಜನೆಯು ಸಿದ್ಧವಾಯಿತು.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ ಈಗ ಆದು ಯಾವ ಹಂತದಲ್ಲಿ ಕೆಲಸ ನಡೆಯುತ್ತಿದೆ? ಮತ್ತು ಈ ವರ್ಷದಲ್ಲಿ ಏನಾದರೂ ನೀರು ಕೊಡಲಿಕ್ಕೆ ಸರ್ಕಾರದವರು ಏನಾದರೂ ಪ್ರಯತ್ನ ಮಾಡು ತ್ತಾರೆಯೇ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನಾನು ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ. ಅಲ್ಲಿ ಕೆಲಸ ಮುಂಕ್ಕಾಯದ ಹಂತದಲ್ಲಿದ್ದು ಆಕ್ಟೋಬರ್ ಹೊತ್ತಿಗೆ ಸಂಪೂರ್ಣವಾಗಿ ಕೆಲಸ ಕಾರ್ಯಗಳು ಮುಗಿಯುತ್ತದೆ ಮತ್ತು ಆ ಹೊತ್ತಿಗೆ ನೀರು ಕೊಡಲಿಕ್ಕೆ ಬರುತ್ತದೆ ಎನ್ನುವ ಅಂದಾಜನ್ನು ಇಟ್ಟು ಕೊಂಡಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಈ ಕೆರೆಯ ಸ್ಪಿಲ್ ವೇ ರೈಟ್ ಗೇಟ್‌ನ ಕೆಲಸ ನಿಧಾನವಾಗಿ ನಡೆಯುತ್ತಿದೆ. ಆದರೆ ಇನ್ನೊಂದು ಕಡೆ ಕೆಲಸ ಮುಗಿದಿದ್ದು ಅಲ್ಲಿ ೩೫, ೪೦ ಕ್ಯೂಸೆಕ್ಟ್ ಆಫ್ ವಾಟರ್ ಇರುವುದರಿಂದ ಅದನ್ನು ನೀರಾವರಿಗೆ ಕೊಡಲಿಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಈ ಸ್ಪಿಲ್ ವೇ ರೈಟ್ ಗೇಟ್‌ನ ಕ್ಯಾಪಾಸಿಟಿಯನ್ನು ಏರಿಸ ಬೇಕು ಎನ್ನುವ ಉದ್ದೇಶದಿಂದಲೇ ಅಲ್ಲಿ ಕಾರ್ಯ ನಡೆಯುತ್ತಿದೆ. ಅದು ಮುಗಿಯುವ ಹಂತದಲ್ಲಿದೆ. ಮಾನ್ಯ ಸದಸ್ಯರ ಸಲಹೆ ಏನೆಂದರೆ ಅಲ್ಲಿ ಈಗಾಗಲೇ ಮುಂಕ್ಕಾಲು ಭಾಗ ಕೆಲಸವಾಗಿರುವುದರಿಂದ ನೀರು ಸ್ಟಾಕ್ ಆಗಿರುವಂಥಾದ್ದನ್ನು ನೀರಾವರಿಗೆ ಉಪಯೋಗಿಸಲು ಸಾಧ್ಯವೇ ಎಂದು ಪ್ರಶ್ನೆ ಕೇಳುತ್ತಿದ್ದಾರೆ. ನಾನು ಆ ವಿಷಯವನ್ನು ಸಂಬಂಧಪಟ್ಟ ಇಂಜಿನಿಯರ್‌ರವರೊಂದಿಗೆ ಮಾತನಾಡಿ, ಆ ರೀತಿ ನೀರಾ ವರಿಗೆ ಕೊಡುವುದು ಸಾಧ್ಯವೆಂದು ಹೇಳುವುದಾದರೆ ಮಾಡೋಣ, ಆದರೂ ಕೂಡ ಆಕ್ಟೋಬರ್ ಹೊತ್ತಿಗೆ ಅಲ್ಲಿಯ ಎಲ್ಲಾ ಕೆಲಸ ಕಾರ್ಯಗಳನ್ನು ಮುಗಿಸಬೇಕೆಂದು ಸರ್ಕಾರದ ಉದ್ದೇಶವಾಗಿದೆ.

## N.R.W.S. Scheme in Channagiri Taluka

166. SRI J.H. PATEL (Channagiri).—Will the Minister for Rural Development and Panchayati Raj be pleased to state.

(a) the number of villages in Channagiri Taluk provided with water supply facilities under the Rural Water Supply Scheme;

(b) the number of villages in which the water supply works are not completed even though the villagers contribution has been paid under the scheme?

SRI K. PRABHAKAR.—(Minister for Rural Development and Panchayati Raj;)

(a) 9.
(b) 3.

ಶ್ರೀ ಜೆ.ಎಚ್. ಪಟೀಲ್.—ತಮ್ಮ ಉತ್ತರದಲ್ಲಿ ೯–೩ ಎಂದು ಕೊಟ್ಟಿದ್ದೀರಿ ಇದು ಮೂರು ವಿತಕ್ಕೆ ಆಗಲಿಲ್ಲವೆಂದು ತಿಳಿಸುತ್ತೀರಾ? ಜೊತೆಗೆ ಈ ಯೋಜನೆಯನ್ನು ತೆಗೆದುಕೊಂಡು ವರ್ಷಗಟ್ಟಲೆ ಆಗಿದ್ದರೂ ಇನ್ನು ಕೆಲಸವಾಗಲಿಲ್ಲವೇಕೆ?

† ಶ್ರೀ ಕೆ. ಪ್ರಭಾಕರ್.—ಕೆಲಸಗಳು ಶುರುವಾಗಿ ಸ್ವಲ್ಪ ಹಣವು ಕೂಡ ಖರ್ಚಾಗಿದೆ. ಕೆಲಸಗಳು ಪ್ರಾರಂಭವಾಗಿ ಪ್ರಗತಿಯಲ್ಲಿವೆ. ಕೆಲವು ಗ್ರಾಮಗಳಲ್ಲಿ ಹಣ ಮಂಜೂರಾಗಿರುವುದರಲ್ಲಿ ಸ್ವಲ್ಪ ಹಣವೂ ಸಹಿತ ಖರ್ಚಾಗಿ ನಾಲ್ಕು ಗ್ರಾಮಗಳಲ್ಲಿ ಕೆಲಸನಡೆಯುತ್ತಿದೆ

ಶ್ರೀ ಜೆ.ಎಚ್. ಪಟೀಲ್.—ನಾನು ಒಂದು ಉದಾಹರಣೆಗೆ ಹೇಳುವುದಾದರೆ ನನ್ನ ಸ್ವಂತ ಗ್ರಾಮ ವಾದ ಚಿರಿಗನೂರುನವರು ಹಣ ಕಟ್ಟಿ ಎರಡೂವರೆ ವರ್ಷಗಳಾಯಿತು ಈ ಗ್ರಾಮಕ್ಕೆ ಒಂದೂವರೆ ಲಕ್ಷ ರೂಪಾಯಿ ಮಂಜೂರು ಆಗಿದೆ ಅದಕ್ಕೆ ಗ್ರಾಮದವರು ೧೭ ಸಾವಿರ ರೂಪಾಯಿ ಕಟ್ಟಿದ್ದಾರೆ. ಹಣ ಕಟ್ಟಿ ಎರಡೂವರೆ ವರ್ಷಗಳಾದರೂ ಕೆಲಸವೇತಕ್ಕೆ ಆಗಲಿಲ್ಲ?